ಅವರಿಗೆ ತೀರಾ ಈಚೆಗೆ ಡಾಕ್ಟರೇಟ್ ಅವಾರ್ಡ್ ಆಗಿತ್ತಾದ್ದರಿಂದ ಆ ಸಂಬಂಧ ಪೇಪರ್‌ನಲ್ಲಿ ತಮ್ಮ ಫೋಟೊ ಸಮೇತ ಪ್ರಕಟವಾದ ಸುದ್ದಿಯ ಒಂದು ಕಾಪಿಯನ್ನು ತುಂಬ ಜತನದಿಂದ ಇರಿಸಿಕೊಂಡು ತಮ್ಮನ್ನು ಭೇಟಿಯಾಗಲು ಬರುವವರಿಗೆ ಅದನ್ನು ತೋರಿಸಲು ಶುರುಮಾಡಿದ್ದರು. ಜೊತೆಗೆ ತಾನು ಡಾಕ್ಟರೇಟ್ ಮಾಡಿದ್ದು ಹೇಗೆ ಎಂದು ಇಂಚಿಂಚೂ ತರ್ಕಬದ್ಧ ವಿವರಣೆ. ಸಂಘಟನೆ, ಸಿದ್ಧಾಂತ ಇತ್ಯಾದಿ ಕಾರಣಗಳಿಗೆ ತಮ್ಮ ಪ್ರಭಾವಲಯಕ್ಕೆ ಬರುವ, ಹಾಗೆ ಬಂದು 'ಗುರುಗಳೇ' ಎಂದು ಕರೆಯುವ, ಕಾಲೇಜುಗಳಲ್ಲಿ ಪ್ರಾಧ್ಯಾಪಕ ವೃತ್ತಿ ಆರಂಭಿಸಿ ಕೆಲವೇ ವರ್ಷ ಕಳೆದಿರುವವರನ್ನು ವರದರಾಜಪ್ಪ ತಮ್ಮ ಪ್ರಭಾವ ಬಳಸಿ ಅವರೆಲ್ಲರನ್ನು ಟೆಕ್ಸ್ಟ್‌ಬುಕ್ ಕಮಿಟಿಗಳಿಗೆ ನೇಮಿಸಿ, ಮತ್ತೆ ಕೆಲವರನ್ನು ಸಂಪಾದಕರನ್ನಾಗಿ ಮಾಡಿ 'ಕೆಲ್ಸ ಮಾಡಬೇಕು ನೀವುಗಳು; ಯಾಕಂದ್ರೆ ನೀವುಗಳೀಗ ಹೊಸ ಹುಲಿಗಳು' ಎಂದು ಹುರಿದುಂಬಿಸುವ ಮೂಲಕ ತಾವು ಹಳೇಹುಲಿ ಎಂದು ನಗುನಗುತ್ತಲೇ ಖಾತ್ರಿಪಡಿಸುತ್ತಿದ್ದರು.



ಹೀಗೆ ಅವರನ್ನು ಭೇಟಿ ಮಾಡಲು ಬರುತ್ತಿದ್ದವರು ಹೊಸ ಹುಲಿಗಳಾಗಿ ಮಾರ್ಪಟ್ಟು, ಅದೇ ಖುಷಿಗೆ ಅವರನ್ನು ಹೊಗಳುತ್ತ ವರದರಾಜಪ್ಪನವರ ಡಾಕ್ಟರೇಟ್ ಕುರಿತ ಗಾಥೆಯನ್ನು ಕೇಳಿಸಿಕೊಳ್ಳುತ್ತಿದ್ದರು. ತುಂಬ ಅಚ್ಚರಿಯ ಸಂಗತಿ ಎಂದರೆ ವರದರಾಜಪ್ಪ ತಾವು ಡಾಕ್ಟರೇಟ್ ಪಡೆದ ಒಂದು ವರ್ಷಕ್ಕೇ ಪಿಎಚ್.ಡಿ ಆಕಾಂಕ್ಷೆಯ ಅಭ್ಯರ್ಥಿಗಳು ಮತ್ತು ವಿದ್ಯಾರ್ಥಿಗಳಿಗೆ ಗೈಡ್ ಮಾಡುವ ಗೈಡ್‌ಶಿಪ್ ಸಂಪಾದಿಸಿಕೊಂಡಿದ್ದರು. ಹಾಗಾಗಿ ಅವರು ಮೇಲುನೋಟಕ್ಕೆ ಕಾಣುವಷ್ಟು ಸರಳ ಅಲ್ಲ; ಬದಲಿಗೆ ಸರ್ಕಾರದ ಕೆಲಸಗಳು ಅವರ ಒಳಗೆ ಸದ್ದಿಲ್ಲದೆ ಗುಪ್ತಗಾಮಿನಿಯಾಗಿ ಸಂಚರಿಸುತ್ತ ಕಾರ್ಯರೂಪ ಪಡೆದುಕೊಳ್ಳುವ ಬಗೆಗೆ ಅವರ ಸ್ನೇಹವಲಯ ಮತ್ತಷ್ಟು ವಿಸ್ತರಿಸಿತ್ತು. ಸಂಘಟನೆಯ ಹಿನ್ನೆಲೆಯಿರುವ ವರದರಾಜಪ್ಪ ತಮ್ಮನ್ನು ಹಾಗೂ ತಮ್ಮಂಥವರನ್ನು ಸೈದ್ಧಾಂತಿಕ ಎರಕದಲ್ಲಿ ಹುಯ್ದು ರೂಪಿಸಿದ ಹಿರಿಯ ಮೇಷ್ಟ್ರು ಸುಂದರಪ್ಪ ಇಂದಿಗೂ ನಾಯಕರಾಗಿಯೇ ಉಳಿದು ಬೆಳಗುತ್ತಿರುವುದನ್ನು ಕಾಣುತ್ತ ಆರಾಧನಾಭಾವ ಬೆಳೆಸಿಕೊಂಡಿರುವುದರ ಜೊತೆಗೆ ತಾನೂ ಈಗ ನಾಯಕ ಎಂದು ತಮ್ಮ ಆತ್ಮಕ್ಕಷ್ಟೇ ನುಡಿಯಲು ಪರವಾನಗಿ ಕೊಟ್ಟು ಗುಪ್ತವಾಗಿ ಆತ್ಮತೃಪ್ತಿಪಟ್ಟುಕೊಳ್ಳುತ್ತಿದ್ದರು. ಇದರ ಸಲುವಾಗಿ ಅವರ ಮುಖದ ಮೇಲೆ ಈಚೆಗೆ ಗತ್ತು ಎನ್ನುವುದು ಹೆಮ್ಮೆಯ ಮುಖವಾಡದಂತೆ ಸ್ಥಾಪಿತವಾಗಿತ್ತು. ಇದನ್ನು ಕಾಣಲು ಸಾಧ್ಯವಾಗಿದ್ದವರು 'ವರದರಾಜಪ್ಪನ ಮಾತಿನ ವರಸೆ ಬದಲಾಗಿದೆ' ಎನ್ನುತ್ತಿದ್ದರು.

ಇದರ ಸತ್ಯಾಸತ್ಯತೆ ಏನೇ ಇರಲಿ, ಸರಿಸುಮಾರು ಇದೇ ಹೊತ್ತಿನಲ್ಲಿ ದೆಹಲಿಯ ಯುಜಿಸಿಯವರು 'ಪದವಿ ಕಾಲೇಜುಗಳಲ್ಲಿ ಬೋಧನಾ ಮಟ್ಟ ಕುಸಿಯುತ್ತಿದೆ. ಇದು ಸುಧಾರಿಸಬೇಕಾದರೆ ಪಾಠ ಮಾಡುವವರು ಸಂಶೋಧನಾರ್ಥಿಗಳಾಗಿ ಅಧ್ಯಯನಕ್ಕೆ ತೊಡಗಬೇಕು ಮತ್ತು ಡಾಕ್ಟರೇಟ್ ಪಡೆಯಬೇಕು... ಇದು ಕಡ್ಡಾಯ' ಎಂದು ಠರಾವು ಹೊರಡಿಸಿದ ಮೇಲಂತೂ ಡಿಗ್ರಿಗೆ ಪಾಠ ಮಾಡುತ್ತಿದ್ದ ಪ್ರಾಧ್ಯಾಪಕರು ಕೆಲವರು ಹಸಿದ ಹುಲಿಗಳಾಗಿ ಮಾರ್ಪಟ್ಟು 'ಪಿಎಚ್.ಡಿ' ಬೇಟೆ ಆರಂಭಿಸಿದ್ದರು.

ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿಗೆ ನೇರ ಸೀಟು ಗಿಟ್ಟಿಸಿಕೊಳ್ಳುವುದು ಕಷ್ಟ; ಕೆಟಗರಿಗಳು ಬಾಧಿಸುತ್ತವೆ ಎಂದು ಕೆಲವರು ಯಾರಿಗೂ ಕೇಳಿಸದ ಹಾಗೆ ಗೊಣಗಿಕೊಂಡರು. ಹಾಗೆ ಗಿಟ್ಟಿಸಿಕೊಳ್ಳಬೇಕಿದ್ದರೆ ವಿಪರೀತ ರಾಜಕಾರಣ ಮಾಡಬೇಕು. ಎಂಟ್ರೆನ್ಸ್ ಟೆಸ್ಟು, ಅಂಕಗಳು ಸೆಕೆಂಡರಿ; ವೈವಾದಲ್ಲಿ ಏನು ಬೇಕಾದರೂ ಆಗಬಹುದು. ಅಸಲಿ ಮಸಲತ್ತು ಅಲ್ಲಿ ನಡೆಯುತ್ತದೆ ಎನ್ನುವ ಮಾತುಗಳು ಚಾಲ್ತಿಗೆ ಬರಲು ಆರಂಭಿಸಿದ ತರುವಾಯ ಹಲವು ಪ್ರತಿಷ್ಠಾನ ಮತ್ತು ಕಾಲೇಜುಗಳು ತಾವು ಪಿಎಚ್.ಡಿ ಕೋರ್ಸ್ ನಡೆಸುತ್ತೇವೆ, ಪರವಾನಗಿ ಕೊಡಿ ಎಂದು ವಿಶ್ವವಿದ್ಯಾಲಯಗಳನ್ನು ಕೇಳಿ ಹೇಗೋ ಅನುಮತಿ ಪಡೆದು ಕೆಲಸ ಆರಂಭಿಸಿದ್ದವು. ಕೋರ್ಸ್ ಅಂತ ತೆರೆದ ಮೇಲೆ ಅಲ್ಲಿಗೆ ಅಭ್ಯರ್ಥಿಗಳನ್ನು ತುಂಬಿಸುವ